ಎಲ್ಲೂ ದಡ ಕಾಣಿಸಲೇ ಇಲ್ಲ. ಕೊನೆಯ ಪಕ್ಷ ಯಾವುದೇ ಒಂದು ಹಡಗಾಗಲೀ ಸ್ಟೀಮರ್ ಆಗಲೀ ಕಾಣಿಸಲಿಲ್ಲ. ಮತ್ತೆಲ್ಲಿ ತಪ್ಪಿ ಹೋಗುತ್ತೇನೋ ಎಂದು ದ್ವೀಪಕ್ಕೆ ಬಂದು ಬಿಡುತ್ತಿದ್ದ. ದಡದಲ್ಲಿ ತೀರದುದ್ದಕ್ಕೂ ಚೆನ್ನಾಗಿ ಬೆಳೆದ ಎತ್ತರದ ತೆಂಗಿನ ಮರಗಳಿವೆ. ಹಣ್ಣಾಗಿ ಉದುರಿದ ತೆಂಗಿನಕಾಯಿಗಳು ಗುಪ್ಪೆಗುಪ್ಪೆಗಳಾಗಿ ಅಂಚಿನಲ್ಲೇ ತೇಲುತ್ತಿವೆ. ಅಷ್ಟೇ ಅಲ್ಲದೆ ದ್ವೀಪದ ತುಂಬಾ ಎಲ್ಲೆಂದರಲ್ಲಿ ಬಾಳೆ ಗಿಡ, ಮಾವಿನ ಮರ, ಸೀಬೆ ಮರ, ಸಪೋಟ ಮರ, ಹಲಸಿನ ಮರ ಮತ್ತು ಬಗೆಬಗೆಯ ಹಣ್ಣಿನ ಗಿಡಗಳು ತುಂಬಿ ತೊನೆಯುತ್ತಿವೆ.

ಸುಬ್ಬನಿಗೆ ತಿಂದಷ್ಟು ಆಹಾರ. ಸಮುದ್ರ ದಡದಲ್ಲಿ ಮರಳಿನಲ್ಲಿ ಕೈಗಳಿಂದ ಗುಂಡಿ ತೋಡಿದರೆ ಶುಚಿಯಾದ ಶುಭ್ರವಾದ ಸಿಹಿ ನೀರು ಕುಡಿಯಲು ಸಿಗುತ್ತಿತ್ತು. ಆ ದ್ವೀಪದಲ್ಲಿ ಅಪಾಯಕಾರಿಯಾದ ಕ್ರೂರ ಪ್ರಾಣಿಗಳಾವುವೂ ಇರಲಿಲ್ಲ. ಕೋತಿಗಳು, ಕಾಡುನಾಯಿಗಳು, ನರಿಗಳು, ಹಕ್ಕಿಪಕ್ಕಿಗಳು ಹೊರತುಪಡಿಸಿ. ನೆಲದ ಮೇಲೆ ಹಾವುಗಳು ಸರಿದಾಡುತ್ತಿದ್ದವು. ಹಾಗಾಗಿ ಮೊದಲ ಎರಡು ರಾತ್ರಿಗಳೂ ಮರಗಳನ್ನು ಹತ್ತಿ ಕಾಲ ಕಳೆದ. ಆ ನಂತರ ಎರಡು ದೊಡ್ಡದೊಡ್ಡ ಮರಗಳ ನಡುವೆ ಎತ್ತರದಲ್ಲಿ ಬಳ್ಳಿಗಳನ್ನು ಬಿಗಿದು ಜೋಕಾಲಿ ಕಟ್ಟಿಕೊಂಡು ಮಲಗುತ್ತಿದ್ದ. ಸದಾ ಹೆಂಡತಿ, ಮಕ್ಕಳು, ಊರು ಅವರನ್ನು ನೆನೆಯುತ್ತ ಕಣ್ಣೀರು ಸುರಿಸುತ್ತಿದ್ದ.

ದಿನಗಳು, ತಿಂಗಳುಗಳು, ವರ್ಷಗಳು ಕಳೆದು ಹೋದವು ಮನುಷ್ಯ ಎನ್ನುವವನು ಯಾರೂ ಕಾಣದೆ, ಯಾರೊಂದಿಗೂ ಮಾತನಾಡದೆ ಕೊನೆಗೆ ಮಾತುಗಳನ್ನೇ ಮರೆತು ಹೋದ. ಪ್ರಾಣಿಗಳ ಕೂಗುಗಳನ್ನು, ಪಕ್ಷಿಗಳ ಕಲರವಗಳನ್ನು ಅಭ್ಯಾಸ ಮಾಡಿದ. ಅದೇ ಆತನ ಭಾಷೆಯಾಯಿತು. ಒಂದು ದಿನ ಹಾಗೇ ತೆಪ್ಪದಲ್ಲಿ ಸಮುದ್ರದ ಮೇಲೆ ಹೊರಟು ಯಾವುದಾದರೂ ಹಡಗು ಕಾಣಿಸುತ್ತದೇನೋ ಎಂದು ನೋಡುತ್ತಿದ್ದ ಆತನಿಗೆ ಯಾವುದೇ ಹಡಗು ಕಾಣಲಿಲ್ಲವಾದರೂ ಆಕಸ್ಮಿಕವಾಗಿ ಮೋಡಗಳು ಕವಿದುಕೊಂಡವು.

ಎದುರು ಗಾಳಿ ಬೀಸಿತು. ತೆಪ್ಪ ತುಂಡಾಯಿತು. ನೀರಿನಲ್ಲಿ ಬಿದ್ದುಬಿಟ್ಟ. ಒಂದು ಮರದ ತುಂಡು ಕೈಗೆ ಸಿಕ್ಕಿತು. ಅದಕ್ಕೇ ಜೋತು ಬಿದ್ದು ಹಗಲು ರಾತ್ರಿ ಕಡಲಿನಲ್ಲೇ ಕಳೆದ. ಗಾಳಿ ಬೀಸಿದ ದಿಕ್ಕಿಗೆ ತೇಲಿಕೊಂಡು ಹೋಗುತ್ತಿದ್ದ. ಒಂದು ದಿನ ಬೆಳಿಗ್ಗೆ ಮರದ ದಿಮ್ಮಿಗೇ ಆತುಕೊಂಡು ಹಾಗೇ ಪ್ರಜ್ಞೆ ಕಳೆದುಕೊಂಡ. ಮಾರನೆಯ ದಿನ ಮತ್ತೆ ಕಣ್ಣು ತೆರೆದಾಗ ಸಮುದ್ರದ ದಡದಲ್ಲಿ ಬಿದ್ದಿದ್ದ.

ಅದು ಕುಮಾರಪ್ಪನ ಕೆಲಸ ಎಂದು ಆತನಿಗೆ ತಿಳಿಯದು. ಅದು ತನ್ನ ಊರ ತೀರವೆಂದು ಗುರುತು ಹಿಡಿದ. ಊರಿನೊಳಕ್ಕೆ ಬಂದ. ಊರು ತುಂಬಾ ಬದಲಾಗಿಬಿಟ್ಟಿದೆ. ತನ್ನವರು ಯಾರೋ ಎಲ್ಲಿದ್ದಾರೋ ತಿಳಿಯಲಾಗದವನಾದ.

ಮದ್ದಲೆಯ ಸದ್ದಡಗಿತು. ಕುಲದ ಹಿರಿಯ, ಸುಬ್ಬನ ಹಳೆಯ ಕಥೆಯನ್ನು ಎಲ್ಲರಿಗೂ ವಿವರಿಸಿ ಹೇಳಿದ. ಎಲ್ಲರ ಕಣ್ಣೂ ಒದ್ದೆಯಾದುವು. ಸುಬ್ಬನು ಹೊರಬಂದ. ಎದುರಿಗೆ ಕಣ್ಣೀರಿಡುತ್ತಾ ನಿಂತಿದ್ದಾಳೆ ಹೆಂಡತಿ ಮುತ್ತುಲಕ್ಷ್ಮಿ, ಪಕ್ಕದಲ್ಲೇ ಕುಮಾರಪ್ಪ ಹೆಂಡತಿ- ಮಕ್ಕಳೊಂದಿಗೆ ನಿಂತಿದ್ದಾನೆ. ಸುಬ್ಬ ಸಮುದ್ರದಲ್ಲಿ ಕೊಚ್ಚಿಕೊಂಡು ಹೋದಾಗ ಕುಮಾರಪ್ಪನಿಗೆ ಆರು ವರ್ಷ. ಸುಬ್ಬನ ಹೆಂಡತಿ ಮುತ್ತುಲಕ್ಷ್ಮಿ ತುಂಬು ಗರ್ಭಿಣಿ. ನಂತರ ಮಗಳನ್ನು ಹೆತ್ತಳು. ಆ ಹುಡುಗಿಗೂ ಮದುವೆಯಾಗಿ ಪಕ್ಕದ ಬೆಸ್ತರ ಪಾಳ್ಯದಲ್ಲಿ ಗಂಡನೊಂದಿಗೆ ನೆಮ್ಮದಿಯಿಂದ ಇದ್ದಾಳೆ. ಆಕೆಗೆ ಒಬ್ಬ ಮಗಳು. ಸುಬ್ಬನ ಹೆಂಡತಿ ಮುತ್ತು ಲಕ್ಷ್ಮಿ ಕವಡೆ ಪಾಳ್ಯದಲ್ಲಿ ತನ್ನ ಅಣ್ಣ ಚಿನ್ನಪ್ಪನ ಸಹಕಾರದಿಂದ ತನ್ನ ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ್ದಳು.

'ಲೋ ಸುಬ್ಬ ಇನ್ನೆಲ್ಲಾ ನಮ್ಮೊಂದಿಗೇ ಇರ್ತಿಯಲ್ಲ, ವರ್ಷಕ್ಕೆ ಅಲ್ಲದಿದ್ದರೂ ಎರಡು ವರ್ಷಗಳಿಗಾದರೂ ನಿನಗೆ ಮಾತು ಬರುತ್ತೆ ಕಣಯ್ಯ. ಇವರೇ ನಿನ್ನವರು. ಹೆಂಡತಿ ಮಕ್ಕಳೊಂದಿಗೆ ಮನೆಗೆ ಹೋಗು' ಎಂದು ಆದೇಶಿಸಿದ ಕುಲದೊಡೆಯ. ಸುಬ್ಬ ಎಂದು ಆತ್ಮೀಯತೆಯಿಂದ ಕರೆಯಲಾಗುವ ಸುಬ್ಬಯ್ಯ ತನ್ನವರ ಹತ್ತಿರಕ್ಕೆ ಸರಿದು ಅಪ್ಪಿಕೊಂಡು ಕಣ್ಣೀರಿನಿಂದ ಅಭಿಷೇಕ ಮಾಡಿದ. ಹೆಂಡತಿ ಸುಬ್ಬಲಕ್ಷ್ಮಿ, ಮಗ ಕುಮಾರಪ್ಪ, ಸೊಸೆ, ಮೊಮ್ಮಕ್ಕಳು ಎಲ್ಲರೂ ಅವನನ್ನು ಕರೆದುಕೊಂಡು ಕೈಹಿಡಿದು ಕವಡೆ ಪಾಳ್ಯದತ್ತ ಹೆಜ್ಜೆ ಹಾಕಿದರು. ●